

# ಜನಪ್ರಿಯವಾಗುತ್ತಿರುವ ಮರದ ಫ್ಲೋರಿಂಗ್

ನಮ್ಮದೇ ಸ್ವಂತ ಮನೆ. ಕೊನೆಗಾಲಕ್ಕೆ ನೆಲೆ ಬೇಕೆಂದು ಜೀವನಪೂರ್ತಿ ದುಡಿದು ಬೆವರು ಸುರಿಸಿ ಕಟ್ಟಿದ ತೃಪ್ತಿಯ ಸೂರು.. ಎಷ್ಟು ಅಲಂಕರಿಸಿದರೂ ಮತ್ತಷ್ಟು ಶೃಂಗರಿಸುವ ತವಕ.! ಜೀವನದಲ್ಲಿ ಒಮ್ಮೆ ಮನೆ ಕಟ್ಟುವುದು, ಚೆನ್ನಾಗಿ ಕಟ್ಟಬೇಕು ಎಂಬ ತುಡಿತ..! ಮಾರುಕಟ್ಟೆಯಲ್ಲಿ ಲಭ್ಯವಿರುವ ಅಲಂಕಾರಿಕ ವಸ್ತುಗಳಿಗೆಲ್ಲಾ ಮನೆಯಲ್ಲೊಂದಿಷ್ಟು ಜಾಗ. ಮನೆಗೆ ಬರುವವರೆಲ್ಲ ನಮ್ಮ ಮನೆಯನ್ನು ಕಂಡು ಕೊಂಡಾಡಬೇಕೆಂಬ ಒಳಗುದಿ.

ಹೀಗೆ ನಮ್ಮ ಕನಸಿನ ಮನೆಯೊಂದಿಗೆ ನಮ್ಮಗೇ ತಿಳಿಯದ ಗಾಢ ಸಂಬಂಧವೊಂದು ಬೆಸೆದುಕೊಂಡಿರುತ್ತದೆ. ಮನೆ ಕಟ್ಟುವ ಮೊದಲೇ ಪರಿಚಯಸ್ಥರನ್ನೆಲ್ಲ ವಿಚಾರಿಸಿ ಸಲಹೆ ಪಡೆದು ಬಹಳ ಮುತುವರ್ಜಿಯಿಂದ ಮನೆಗೊಪ್ಪುವ ವಿನ್ಯಾಸ, ಬಣ್ಣವನ್ನು ಆಯ್ಕೆ ಮಾಡುತ್ತೇವೆ. ಮನಕ್ಕೊಪ್ಪುವ ಮನೆ ನಿರ್ಮಿಸುವಾಗ ಅದರ ನೆಲಹಾಸು (ಫ್ಲೋರಿಂಗ್) ಬಗ್ಗೆ ತಲೆ ಕೆಡಿಸಿಕೊಳ್ಳದಿರಲಾದೀತೇ? ಅದಕ್ಕಾಗಿಯೇ ಪಾಶ್ಚಿಮಾತ್ಯ ಮತ್ತು ದೇಸೀ ಸೊಗಡುಳ್ಳ ವಿಭಿನ್ನ ಶೈಲಿಯ ನೆಲಹಾಸುಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ.

ಪಾಶ್ಚಿಮಾತ್ಯ ದೇಶಗಳಲ್ಲಿ ಮರದಿಂದ ಮನೆ ಕಟ್ಟುವುದು, ಇಲ್ಲವೆ ಮನೆಯ ಬಹುತೇಕ ಭಾಗಕ್ಕೆ ಮರದ ಬಳಕೆ ಮಾಡುತ್ತಾರೆ. ಅದೇ ಒಂದು ಟ್ರೆಂಡ್ ನಮ್ಮಲ್ಲೂ ಬಂದಿದೆ. ಇಲ್ಲಿ ಮರದ ಮನೆ ಬಹಳ ಅಪರೂಪವಾದರೂ, ಮನೆಗೆ ಸಹಜ ನೈಸರ್ಗಿಕ ಸೊಬಗನ್ನು ನೀಡುವ ಮರದ ಫ್ಲೋರಿಂಗ್ ಬಳಸುವವರ ಸಂಖ್ಯೆ ಮಂದಗತಿಯಲ್ಲಿ ಏರುತ್ತಿದೆ.

ಮನೆ ನೋಡಲು ಹೊರಗಿನಿಂದಷ್ಟೇ ಸುಂದರವಾಗಿದ್ದರೆ ಸಾಲದು. ಮನೆಯ ಒಳಗೆ ಪ್ರವೇಶಿಸುತ್ತಿದ್ದಂತೆ ಆಕರ್ಷಿಸುವಂತಿರಬೇಕು. ಹೀಗಾಗಿ ಇಡೀ ಮನೆಯನ್ನು ಸುಂದರವಾಗಿಸುವ ವಿಭಿನ್ನ ಶೈಲಿಯ ಫ್ಲೋರಿಂಗ್ ಜನಪ್ರಿಯತೆ ಪಡೆಯುತ್ತಿದೆ. 'ನಮ್ಮಲ್ಲಿ ಹೊಸತನ ಬಯಸುವವರು ಮರದ ಫ್ಲೋರಿಂಗ್ ಮಾಡಿಸುತ್ತಾರೆ' ಎನ್ನುತ್ತಾರೆ ಬೆಂಗಳೂರಿನ ಒಳಾಂಗಣ ವಿನ್ಯಾಸಕಾರ ಸಂತೋಷ್.

ಟೀಕ್, ಓಕ್, ಬಿದಿರು, ವಾಲ್‌ನಟ್ ಮರಗಳಿಂದ ಈ ಫ್ಲೋರಿಂಗ್ ಹೆಚ್ಚಾಗಿ ತಯಾರಾಗುತ್ತದೆ. ಬೆಲೆ ಒಂದು ಚದರ ಅಡಿಗೆ 150 ರೂಪಾಯಿಯಿಂದ ಆರಂಭವಾಗುತ್ತದೆ. ವಿದೇಶದಿಂದ ಆಮದಾದ ಗುಣಮಟ್ಟದ ಫ್ಲೋರಿಂಗ್‌ಗೆ ಭಾರೀ ಬೆಲೆ ಇದೆ. ಗ್ರಾಹಕರ ಅಭಿರುಚಿ ಮತ್ತು ಅವರ ಆಯ್ಕೆಗೆ ತಕ್ಕಂತೆ ಬೆಲೆಯಲ್ಲಿ ಏರಿಕೆಯಾಗುತ್ತದೆ. ಮರದ ಬಳಕೆಯಿಂದ ಗೆದ್ದಲು ಹಿಡಿಯಬಹುದೆಂಬ ಭಯ ಬೇಡ. ಇದರ ಆಯಸ್ಸು ನಿರ್ವಹಣೆಯನ್ನು ಅವಲಂಬಿಸಿದೆ. ಸರಿಯಾಗಿ ಪೋಷಣೆ ಮಾಡಿದರೆ 5 ರಿಂದ 15 ವರ್ಷದವರೆಗೆ ಬಾಳಿಕೆ ಬರುತ್ತದೆ.

ಇದರ ಅನುಕೂಲವೆಂದರೆ, ಪ್ರತಿದಿನ ನೆಲ ಒರೆಸಬೇಕೆಂಬ ತಲೆ ನೋವಿರುವುದಿಲ್ಲ. ವಾರಕ್ಕೊಮ್ಮೆ ಒರೆಸಿದರೆ ಸಾಕು. ಚಳಿ ಮತ್ತು ಸೆಖೆ ಎರಡೂ ಕಾಲದಲ್ಲಿ ಉಷ್ಣತೆಯ ಸಮತೋಲನ ಕಾಪಾಡುವುದು ಇದರ ವೈಶಿಷ್ಟ್ಯ. ಸಾಮಾನ್ಯವಾಗಿ ನಮ್ಮಲ್ಲಿ ವೈಟ್ ಮಾರ್ಬಲ್ ಹಾಗೂ ಗ್ರಾನೈಟ್‌ನ ನೆಲಹಾಸು ಜನಪ್ರಿಯ. ಆದರೆ ಇದರಿಂದ ಶೀತ ಹೆಚ್ಚು. ಮಂಡಿನೋವು ಮುಂತಾಗಿ ನೋವಿನಿಂದ ಬಳಲುವ ಹಿರಿಯರಿಗೆ ಕೆಲವೊಮ್ಮೆ ಇಂತಹ ಮಾರ್ಬಲ್ ಫ್ಲೋರಿಂಗ್ ಆಗಿಬರುವುದಿಲ್ಲ. ಥಂಡಿ ಪ್ರದೇಶದಲ್ಲಿ ಮರದ ಫ್ಲೋರಿಂಗ್ ಮಾಡಿಸುವುದು ಉತ್ತಮ ಎನ್ನುತ್ತಾರೆ ವಿನ್ಯಾಸಕರು. ಬೆಂಗಳೂರಿನಂತಹ ಹವೆ ಇರುವ ನಗರಗಳಿಗೆ ಇದು ಅತ್ಯುತ್ತಮ.

ಆದರೆ ಮರದ ಫ್ಲೋರಿಂಗ್ ಬಗ್ಗೆ ಸ್ವಲ್ಪ ಹೆಚ್ಚಿನ ಕಾಳಜಿ ಅಗತ್ಯ. ಇದರ



ಮೇಲೆ ನೀರು ಬಿದ್ದರೆ ತುಂಬಾ ಹೊತ್ತು ಹಾಗೇ ಬಿಡಬಾರದು. ಹೈ ಹೀಲ್ಡ್ ಚಪ್ಪಲಿ ಧರಿಸಿ ಇದರ ಮೇಲೆ ನಡೆದರೆ ಮರ ಸವೆಯುವುದರ ಜೊತೆಗೆ ಹೊಳಪು ಕಡಿಮೆಯಾಗುತ್ತದೆ. ಕುರ್ಚಿ, ಮೇಜುಗಳನ್ನು ಇದರ ಮೇಲೆ ಹಾಗೆ ಇರಿಸುವುದರಿಂದ ಗೆರೆ ಬೀಳುತ್ತದೆ. ಕುರ್ಚಿ, ಮೇಜುಗಳನ್ನು ಇಡುವಾಗ ಅದರ ಕೆಳಗೆ ಬಟ್ಟೆಯನ್ನು ಇಡಬೇಕು. ಮರದ ಫ್ಲೋರಿಂಗ್‌ಅನ್ನು ಸ್ವಚ್ಛಗೊಳಿಸಲು ವಿವಿಧ ಬಗೆಯ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಲಭ್ಯವಿದೆ. ಈ ಫ್ಲೋರಿಂಗ್ ಒರೆಸಲು ಎಣ್ಣೆಯುಕ್ತ ಕ್ಲೆನ್ಸರ್ ಬಳಸುವುದರಿಂದ ಶಾಶ್ವತವಾಗಿ ಹಾಳಾಗುವ ಸಂಭವವಿದೆ. ನೀರಿನ ಕ್ಲೆನ್ಸರ್ ಬಳಸುವುದು ಉತ್ತಮ.

ಹಿಂದೆಲ್ಲಾ ಮಲಗುವ ಕೋಣೆಗೆ ಮಾತ್ರ ಇಂತಹ ಮರದ ಫ್ಲೋರಿಂಗ್ ಮಾಡಿಸುತ್ತಿದ್ದರು. ಆದರೆ ಇಂದು ಇದರ ವಿನ್ಯಾಸ ಮತ್ತು ಗುಣಮಟ್ಟದಲ್ಲಿ ಸಾಕಷ್ಟು ಬೆಳವಣಿಗೆ ಆಗಿದೆ. ಹೀಗಾಗಿ ಬಾತ್‌ರೂಮ್ ಹೊರತುಪಡಿಸಿ ಪೂರ್ತಿ ಮನೆಗೆ ಮರದ ಫ್ಲೋರಿಂಗ್ ಮಾಡಿಸುವವರೂ ಇದ್ದಾರೆ. ಬಾತ್‌ರೂಮ್‌ನಲ್ಲಿ ತೇವಾಂಶ ಇರುವುದರಿಂದ ಮರದ ಫ್ಲೋರಿಂಗ್ ಸೂಕ್ತವಲ್ಲ.

ಇತ್ತೀಚೆಗೆ ವಾಣಿಜ್ಯ ಕಟ್ಟಡ, ಬೃಹತ್ ರೆಸ್ಟೋರೆಂಟ್‌ಗಳಲ್ಲಿ ಮರದ ಫ್ಲೋರಿಂಗ್ ಸಾಮಾನ್ಯವಾಗುತ್ತಿದೆ. ಷೋರೂಮ್‌ಗಳಿಗೆ ಮರದ ಫ್ಲೋರಿಂಗ್ ವಿಶಿಷ್ಟ ಅಂದ ಒದಗಿಸುತ್ತದೆ. ರೆಸ್ಟೋರೆಂಟ್‌ಗಳಲ್ಲಿ ಆಧುನಿಕ ಒಳವಿನ್ಯಾಸದ ಭಾಗವಾಗಿ ಮರದ ಫ್ಲೋರಿಂಗ್ ಅಭಿವೃದ್ಧಿ ಹೊಂದಿದೆ. ವಿದೇಶಗಳಲ್ಲಿ ಸಿಗುವ ವಿಶಿಷ್ಟ ವಿನ್ಯಾಸ, ಗುಣಮಟ್ಟದ ಮರಗಳನ್ನು ಆಮದು ಮಾಡುವ ಉದ್ಯಮವೂ ಭರದಿಂದ ಬೆಳೆದಿದೆ.

■ ವಿದ್ಯಾಶ್ರೀ ಎಸ್.



